2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ35/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ತಿಪ್ಪೇಶಪ್ಪ | ಪಿಡಬ್ಲೂ-4 |
| ತಂದೆಯ ಹೆಸರು | - | ರಾಜಪ್ಪ | ಸಿಡಬ್ಲೂ -4 |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ಖಾಸಗಿ ಕೆಲಸ | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 07.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತಿಲ್ಲ. ಚಾಸಾ.5 ರವರು ಗೊತ್ತು. ಮೃತ ರುದ್ರಸ್ವಾಮಿ ಎಂಬ ವ್ಯಕ್ತಿ ನನಗೆ ಗೊತ್ತಿಲ್ಲ. ಈಗ್ಗೆ 5 ವರ್ಷಗಳ ಹಿಂದೆ ಬುಕ್ಕಾಂಬೂದಿಯ ಗ್ರಾಮ ಪಂಚಾಯ್ತಿಯ ಸದಸ್ಯನಾಗಿದ್ದೆನು. ಆಗ ಅಜ್ಜಂಪುರ ಪೊಲೀಸರು ಯಾವುದೋ ಗಂಡಸಿನ ಶವ ಸಿಕ್ಕಿದೆ ಎಂದು ಹೇಳಿ ನನ್ನ ಸಹಿಯನ್ನು ಪಡೆದುಕೊಂಡರು. ಅದನ್ನು ಹೊರತುಪಡಿಸಿ ನನಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಬುಕ್ಕಾಂಬೂದಿಯ ಪಕ್ಕದಲ್ಲಿ ಬುಕ್ಕರಾಯನ ಕೆರೆ ಇದೆ. ನಾನು ಸಹಿ ಮಾಡಿದ ದಿನ ಸದರಿ ಕೆರೆಯ ಬಳಿ ಹೋಗಿಲ್ಲ. ಸಾಕ್ಷಿಗೆ ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿರುವ

ಫೋಟೋವನ್ನು ತೋರಿಸಲಾಗಿ ಅದರಲ್ಲಿ ಬುಕ್ಕರಾಯನ ಕೆರೆ ಇದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋದಲ್ಲಿ ಕಂಡು ಬರುವ ಶವವನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-</u>

2. ದಿಃ 09.11.2018 ರಂದು ಮಧ್ಯಾಹ್ನ ಸುಮಾರು 3.45 ಗಂಟೆ ಸಮಯದಲ್ಲಿ ನಾನು ಶಿವನಿಯಲ್ಲಿದ್ದ ಸಮಯದಲ್ಲಿ ಚಾಸಾ.5 ರವರು ನನಗೆ ಕರೆ ಮಾಡಿ ಬುಕ್ಕರಾಯನ ಕೆರೆಯಲ್ಲಿ ಒಂದು ಗೋಣಿ ಚೀಲ ತೇಲುತ್ತಿದ್ದು ಯಾವುದೋ ಶವ ಇರಬಹುದೆಂದು ಆತನ ಸ್ನೇಹಿತರೊಬ್ಬರು ಆತನಿಗೆ ಕರೆ ಮಾಡಿ ತಿಳಿಸಿದ್ದಾಗಿ ಹೇಳಿದರು ಎಂದರೆ ಸರಿಯಲ್ಲ. ನಾನು ಕೂಡಲೇ ಬುಕ್ಕರಾಯನ ಕೆರೆಯ ಹತ್ತಿರ ಹೋಗಿ ನೋಡಿದೆನು ಎಂದರೆ ಸರಿಯಲ್ಲ. ಅಲ್ಲಿ ಕೆರೆಯ ನೀರಿನಲ್ಲಿ ಒಂದು ಗೋಣಿ ಚೀಲದ ಮೂಟೆ ತೇಲುತ್ತಿತ್ತು ಎಂದರೆ ಸರಿಯಲ್ಲ. ಆಗ ಅಲ್ಲಿಗೆ ಸಾರ್ವಜನಿಕರು ಸೇರಿದ್ದರು ಎಂದರೆ ಸರಿಯಲ್ಲ. ಅವರ ಸಹಾಯದಿಂದ ಕೆರೆಯಲ್ಲಿ ತೇಲುತ್ತಿದ್ದ ಚೀಲವನ್ನು ಮೇಲೆ ತೆಗೆಸಿದೆವು ಎಂದರೆ ಸರಿಯಲ್ಲ. ಸದರಿ ಚೀಲದ ಬಾಯಿಯನ್ನು ಕಟ್ಟಲಾಗಿತ್ತು ಎಂದರೆ ಸರಿಯಲ್ಲ. ಸದರಿ ಚೀಲವನ್ನು ತೆರೆದು ನೋಡಲಾಗಿ ಅದರ ಒಳಗೆ ಇನ್ನೊಂದು ಹಳದಿ ಬಣ್ಣದ ಚೀಲವಿದ್ದು ಅದನ್ನು ಸಹ ಬಾಯಿ ಕಟ್ಟಲಾಗಿತ್ತು ಎಂದರೆ

ಸರಿಯಲ್ಲ. ಸದರಿ ಹಳದಿ ಚೀಲದ ಬಾಯಿಯನ್ನು ಬಿಚ್ಚಿದಾಗ ಅದರಲ್ಲಿ ಸುಮಾರು 30-35 ವರ್ಷ ಪ್ರಾಯದ ಒಂದು ರುಂಡವಿಲ್ಲದ ಗಂಡಸಿನ ಶವ ಇತ್ತು ಎಂದರೆ ಸರಿಯಲ್ಲ. ಸದರಿ ಮೃತ ದೇಹದ ಮೇಲೆ ವಾಣಿ ಮತ್ತು ಐಶ್ವರ್ಯ ಎಂಬ ಹಚ್ಚೆಯ ಗುರುತು ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಮೃತ ದೇಹದಿಂದ ತುಂಬಾ ವಾಸನೆ ಬರುತ್ತಿತ್ತು ಎಂದರೆ ಸರಿಯಲ್ಲ. ಸದರಿ ಶವವನ್ನು ಯಾರೋ ದುಷ್ಕರ್ಮಿಗಳು 1-2 ದಿನಗಳ ಹಿಂದೆ ಹರಿತವಾದ ಆಯುಧದಿಂದ ಕುತ್ತಿಗೆಯನ್ನು ಕಡಿದು ರುಂಡ ಮತ್ತು ಮುಂಡವನ್ನು ಬೇರೆ ಮಾಡಿ ಗುರುತು ಸಿಗಬಾರದು ಎಂಬ ಕಾರಣದಿಂದ ಮೃತ ದೇಹವನ್ನು ಚೀಲದಲ್ಲಿ ಹಾಕಿ ಎಸೆದು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಷಯಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

3. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.8 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.